**ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ., ಹಾನಗಲ್ಲ.**

**ಸಿ.ಸಿ ನಂಬರ್ಃ 34/2024**

ಫಿರ್ಯಾದಿಃ ಸರ್ಕಾರ, ಪ್ರತಿನಿಧಿಸುವವರು,
ಆಡೂರ ಪೊಲೀಸ್ ಠಾಣಾ ಪೋಲೀಸರು.

ವಿರುದ್ದ

ಆರೋಪಿಃ

1. ಚನ್ನಪ್ಪ ದೊಡ್ಡಮನಿ
ವಯಸ್ಸುಃ 48 ವರ್ಷ, ಉಃ ಸರ್ಕಾರಿ ನೌಕರ
ವಾಸಃ ಅಕ್ಕಿಆಲೂರ, ತಾಃ ಹಾನಗಲ್ಲ

2. ಹುಚ್ಚಪ್ಪ ಬಸಪ್ಪ ಕುಂಚೂರ
ವಯಸ್ಸುಃ 56 ವರ್ಷ, ಉಃ ಸರ್ಕಾರಿ ನೌಕರ
ವಾಸಃ ಅಕ್ಕಿಆಲೂರ, ತಾಃ ಹಾನಗಲ್ಲ

3. ಜಿಂಗಾಡೆ ಎಸ್ ಎಸ್
ವಯಸ್ಸುಃ 52 ವರ್ಷ, ಉಃ ಸರ್ಕಾರಿ ನೌಕರ
ವಾಸಃ ಕೆ ಇ ಬಿ ಕಚೇರಿ, ಹಾನಗಲ್ಲ,
ತಾಃ ಹಾನಗಲ್ಲ

**ಆರೋಪಣೆ**

ನಾನು ಶ್ರೀ. ಜನಾರ್ಧನ ಎಸ್ ಕೆ. ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್,ಸಿ ನ್ಯಾಯಾಲಯ, ಹಾನಗಲ್ಲ, ಆರೋಪಿತರಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆ,

1. ಆಡೂರ ಪೊಲೀಸ್ ಠಾಣಾ ವ್ಯಾಪ್ತಿಯ ಅಕ್ಕಿಆಲೂರ ವಿದ್ಯುತ್ ಪ್ರಸರಣ ಕೇಂದ್ರದ ವ್ಯಾಪ್ತಿಯಲ್ಲಿರುವ ಅರಳೇಶ್ವರ ಗ್ರಾಮದ ಗುರುಲಿಂಗಪ್ಪ ಚಿಕ್ಕೇರಿ ರವರ ಜಮೀನಿನಲ್ಲಿರುವ ವಿದ್ಯುತ್ ಟ್ರಾನ್ಸಫಾರ್ಮಗೆ ಸಂಪರ್ಕ ಮಾಡುವ ಕೆ ಇ ಬಿ ವಿದ್ಯುತ್ ಲೈನುಗಳು ಹಳೆಯದಾಗಿ ಪದೇ ಪದೇ ಹರಿದು ಬೀಳುತ್ತಿದ್ದರಿಂದ, ಸದರಿ ಅರಳೇಶ್ವರ ಗ್ರಾಮದ ಗ್ರಾಮಸ್ಥರು ಅಕ್ಕಿಆಲೂರ ಶಾಖೆಯ ಕೆ.ಇ.ಬಿ ಅಧಿಕಾರಿಗಳಿಗೆ ವಿದ್ಯುತ್ ಟ್ರಾನ್ಸಫಾರ್ಮನ್ನು ಬೇರೆ ಕಡೆಗೆ ಬದಲಾವಣೆ ಮಾಡುವಂತೆ ಹಲವಾರು ಬಾರಿ ಮನವಿ ಮಾಡಿದ್ದರೂ ಸಹಾ ಆರೋಪಿಯಾದ ನೀವು ವಿದ್ಯುತ್ ತಂತಿಗಳ ಬದಲಾವಣೆಗಾಗಲಿ, ದುರಸ್ಥಿಗಾಗಲಿ ಯಾವುದೇ ಕ್ರಮವನ್ನು ತೆಗೆದುಕೊಳ್ಳದೇ ತೀವ್ರ ನಿರ್ಲಕ್ಷತೆವಹಿಸಿ, ಅದೇ ಹಳೆಯ ತಂತಿಗಳ ಮರು ಜೋಡಣೆ ಮಾಡುತ್ತಾ ಬಂದಿದ್ದು, ದಿಃ11-10-2022 ರಂದು ಮಧ್ಯಾಹ 12-00 ಗಂಟೆಯಿಂದ ಸಂಜೆ 5-00 ಗಂಟೆಯ ಅವಧಿಯಲ್ಲಿ ಸದರಿ ವಿದ್ಯುತ್ ಟ್ರಾನ್ಸಫಾರ್ಮಗೆ ಸಂಪರ್ಕ ಮಾಡಿದ ವಿದ್ಯುತ್ ತಂತಿಗಳ ಪೈಕಿ ಒಂದು ವಿದ್ಯುತ್ ತಂತಿಯು ತುಂಡಾಗಿ ಬಿದ್ದಿದ್ದು, ಅದೇ ವೇಳೆಗೆ ಶ್ರೀ.ಪ್ರಭುಲಿಂಗ ಹಂಚಿನಮನಿ ರವರು ತಮ್ಮ

ಜಮೀನಿನ ಕೆಲಸಕ್ಕೆ ಹೋಗಿದ್ದಾಗ, ಸದರಿ ನೆಲಕ್ಕೆ ಬಿದ್ದಿದ್ದ ವಿದ್ಯುತ್ ತಂತಿಯು ಪ್ರಭುಲಿಂಗ ಹಂಚಿನಮನಿ ರವರ ಕಾಲು ತಾಕಿ ತಂತಿಯಲ್ಲಿದ್ದ ವಿದ್ಯುತ್ ದೇಹದಲ್ಲಿ ಹರಿದು ಸ್ಥಳದಲ್ಲಿಯೇ ಮರಣ ಹೊಂದುವಂತೆ ಮಾಡಿರುತ್ತೀರಿ. ಈ ರೀತ್ಯ ಆರೋಪಿಗಳಾದ ನೀವು ಭಾ.ದಂ.ಸಂ.ಕಲಂ 304 ಎ ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ?

ಪ್ರಃ 1. ಈಗ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದೆಯಾ? ಅದು ನಿಮಗೆ ಅರ್ಥವಾಯಿತೇ ?

ಆರೋಪಿ ಉತ್ತರಃ

ಪ್ರಃ 2. ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೊ?

ಆರೋಪಿ ಉತ್ತರಃ

(ಆರೋಪಿತನಿಗೆ ದಿನಾಂಕಃ 29-10-2024 ರಂದು ಆಪಾದನೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ತಿಳಿಸಿ ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣಿಕರಿಸುತ್ತೇನೆ)

ಹಾನಗಲ್ಲ
ದಿನಾಂಕಃ 29-10-2024.

ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ
ನ್ಯಾಯಾಲಯ, ಹಾನಗಲ್ಲ.

ಆರೋಪಿ ಸಹಿ

1 ನೇ ಆರೋಪಿ ಸಹಿ

2 ನೇ ಆರೋಪಿ ಸಹಿ

3 ನೇ ಆರೋಪಿ ಸಹಿ